‘ಇಷ್ಟೊತ್ತಾದರೂ ಹಾಲಿನವಾ ಬಂದಿಲ್ಲ ನೋಡ್ರಿ. ಏನ್ಮಾಡೂದು? ಇರ್ಲಿಕ್ಕಂದ್ರ ಚಹಾ ಕುಡಿಸೇ ಕಳಸ್ತಿದ್ದೆ. ಮುಂದಿನ ಸಲ ಬಂದಾಗ ಹಂಗೇ ಹೋಗಬಾರ್ದು. ಊಟಾ ಮಾಡಿಕೊಂಡೇ ಹೋಗ್ಬೇಕು. ಈಗ಼್ಲೇ ಹೇಳಿರ್ತೀನಿ ನೋಡ್ರಿ ಹಾಂ’ ಹುಕುಮಿಸುವ ರೀತಿಯ ಅದೇ ದೇಶಾವರಿ ನಗೆಯೊಂದಿಗೆ ಕೈಮುಗಿಯುತ್ತಾನೆ. ಇದೂ ಕೂಡ ‘ಹಂಗೇ ಅಂತಿರತಾನ’ ವರ್ಗದ ಆಸಾಮಿ. ಹಾಲಿಲ್ಲಾ ಬಟ್ಟಲಿಲ್ಲಾ ಗೊಟಕ್ ಅಂದ್ರರಂತ ಅಂಬೋ ಮಾತು ನಿಮ್ಮ ಮನಸಿನಲ್ಲಿ ಈಗ ಸುಳಿದಾಡುತ್ತದೆ.

ಆದರೆ, ಕೆಲವರನ್ನು ಹಾಗೆಲ್ಲ ನಾವು ಗೌಣವಾಗಿ ತೆಗೆದುಕೊಳ್ಳಲಾಗದು. ಯಾಕೆಂದರೆ, ಅವರೆಲ್ಲ ಪೆಟ್ಟು ತಿಂದು ಬದುಕಿನಲ್ಲಿ ಗಟ್ಟಿಯಾದವರು. ಅವರು ಆಡುವ ಮಾತುಗಳಲ್ಲಿ ಅನುಭವ ತುಂಬಿರುತ್ತದೆ.

ಒಮ್ಮೆ ಹೀಗಾಯಿತು.

‘ಏ ತಂಗಿಗೋಳಯ್ಯಾ, ಆಕಾಶದಾಗ ಮಾಡ ಹಾಕೇದ, ಮಳೀ ಬಂದರೂ ಬರಬಹುದು, ಛತ್ರಿ ತಗೊಂಡ ಹೋಗ್ರೇ’ ಎಂದು ಹೊರಗೆ ಹೊರಟು ನಿಂತಿರುವ ತನ್ನ ಮೊಮ್ಮಕ್ಕಳಾದ ಖುಷಿ ಮತ್ತು ಕೃತಿಗೆ ಅವರ ಅಜ್ಜಿ, ಅಂದರೆ ನನ್ನವಳು ಎಚ್ಚರಿಸಿದ್ದಳು. ಅಜ್ಜಿಯ ಕಿವಿಮಾತಿಗೆ ಮೊಮ್ಮಕ್ಕಳು ಎಂದಾದರೂ ಕಿವಿ ಕೊಟ್ಟಾರೆಯೆ!

‘ಈಗ್ಯಾತರ ಮಳಿ ಬಂದೀತೇ ಅಜ್ಜೀ?’ ಎನ್ನುತ್ತ ಮೊಮ್ಮಕ್ಕಳು ಹೊರಟೇಬಿಟ್ಟರು. ಹಿರಿಯರ ಮಾತುಗಳೆಂದರೆ ಹರೆಯದವರಿಗೆ ಹೇಗೆ ಪಥ್ಯವಾದೀತು?

‘ಯಾವಾಗ ನೋಡಿದ್ರೂ ಈ ಅಜ್ಜಿದು ಪಿಟಿಪಿಟಿ ಇದ್ದದ್ದೆ. ಹಂಗೇ ಅಂತಿರತಾಳ ನಡಿಯೆ’ ಅನ್ನುತ್ತ ಮನೆಯಿಂದ ಹೊರಬಿದ್ದವರನ್ನು ಮಳೆ ಬಿಡಬೇಕಲ್ಲ! ಇವರು ಹೇಳಿದಂತೆ ಕೇಳಿಕೊಂಡಿರಲು ಮಳೆ ಏನು ಇವರಾಧೀನವೆ! ದಾರಿ ಮಧ್ಯೆ ಜೋರಾಗಿ ಹಣಿದು ಅವರನ್ನು ನೆನೆಸಿಬಿಟ್ಟಿತ್ತು. ಹಳಹಳಿಸುತ್ತ ಮನೆಗೆ ಬಂದವರು, ನೆಗಡಿ ಜ್ವರ ಬಂದು ಎಂಟು ದಿನ ಹಾಸಿಗೆ ಹಿಡಿಯಬೇಕಾಯಿತು.

ಹಂಗೇ ಅಂತಿರತಾರ ಅನ್ನುವುದರ ಅರ್ಥವನ್ನು ನಾವು ನಿಘಂಟು ಹಿಡಿದುಕೊಂಡು ಹುಡುಕಬೇಕಿಲ್ಲ. ಅವರವರಿಗೆ

